(6ನೇ ಪುಟದಿಂದ)

ದುರ್ಗೆಯ ದಿವ್ಯ ಸ್ವರೂಪಗಳಾದ ಬ್ರಹ್ಮಾಣಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಮಾಹೇಶ್ವರಿ, ದುರ್ಗಾ, ಕಾಳಿ, ಚಂಡಿಕೆ– ಹೀಗೆ ಎಲ್ಲಾ ಶಕ್ತಿದೇವತೆಗಳನ್ನೂ ಆರಾಧಿಸುವ ಒಡೆಯರ್, ಶಿವ ಸನ್ನಿಧಿ, ಕೃಷ್ಣ ಸನ್ನಿಧಿ, ಚಾಮುಂಡಿ ಸನ್ನಿಧಿಗಳಲ್ಲಿ ಪೂಜೆ ಸಲ್ಲಿಸುತ್ತಾರೆ. ನಂತರ ದೇವೀ ಭಾಗವತ, ರಾಮಾಯಣ ಪಾರಾಯಣ ನಡೆಯುತ್ತದೆ. ಗಣಪತಿ ಪೂಜೆ, ಅಷ್ಟದಿಕ್ಪಾಲಕರ ಪೂಜೆ, ನವಗ್ರಹ ಪೂಜೆ, ಬ್ರಹ್ಮ, ವಿಷ್ಣು, ಮಹೇಶ್ವರ, ಮಹಾಕಾಳಿ, ಮಹಾ ಸರಸ್ವತಿ, ಮಹಾಲಕ್ಷ್ಮಿ ಪೂಜೆಗಳೆಲ್ಲವೂ ಆಗಿ ನಂತರ ಅಷ್ಟೋತ್ತರವಾಗುತ್ತದೆ.

ಚಂಡಿಕಾ ಹೋಮ, ಬಲಿ, ಮಹಿಷವಧೆ, ಶಮೀವೃಕ್ಷ ಪೂಜೆ ಸೇರಿದಂತೆ ಅನೇಕ ಪೂಜಾವಿಧಿಗಳು ಸಾಂಗೋಪವಾಗಿ ನಡೆದು ದೇವೀ ಭಾಗವತವನ್ನು ಪಾರಾಯಣ ಮಾಡುವಾಗ ಮಹಿಷಾಸುರನನ್ನು ಸಾಂಕೇತಿಕವಾಗಿ ಸಂಹರಿಸಲಾಗುತ್ತದೆ. ಇದಕ್ಕಾಗಿ ಮರದಿಂದ ಮಹಿಷಾಸುರನ ಪ್ರತಿಕೃತಿಯನ್ನು ತಯಾರಿಸಿ ಅದಕ್ಕೆ ಕುಂಕುಮದ ರಕ್ತವರ್ಣವನ್ನು ಸುರಿಯಲಾಗುತ್ತದೆ.

ಕಾಳಿಕಾ ಪುರಾಣದ ಪ್ರಕಾರ ವೈದಿಕವಾಗಿ ಅರಮನೆಯೊಳಗೆ ಕಾರ್ಯಕ್ರಮ ನಡೆಸುವ ಮುನ್ನ ಬೆಳಿಗ್ಗೆ ರತ್ನಸಿಂಹಾಸನಕ್ಕೂ ಪೂಜೆ ನಡೆಯುತ್ತದೆ. ಈ ನಡುವೆ ಕಂಕಣಧಾರಿಗಳಾದ ಒಡೆಯರ್ ದಂಪತಿಗೂ ಪೂಜೆ ಮಾಡಲಾಗುತ್ತದೆ. ದರ್ಬಾರಿಗೆ ಬರುವುದಕ್ಕೂ ಮೊದಲು ಒಡೆಯರ್ ಪತ್ನಿ ಪ್ರಮೋದಾದೇವಿ, ಸುಮಂಗಲೆಯರೊಡನೆ ಒಡೆಯರ್ ಅವರ ಪಾದಪೂಜೆ ಮಾಡಿ ಹಣೆಗೆ ತಿಲಕ ಇಡುತ್ತಾರೆ. ಹತ್ತು ದಿನಗಳೂ ಒಡೆಯರ್‌ಗೆ ಈ ರೀತಿ ಪಾದಪೂಜೆ ಅರಮನೆಯ ಕಲ್ಯಾಣಮಂಟಪದ ಮೇಲ್ಭಾಗದಲ್ಲಿ ನಡೆಯುತ್ತದೆ. ಇದೇ ವೇಳೆ ವಿವಿಧ ದಂತದ ಗೊಂಬೆಗಳನ್ನು ಗೊಂಬೆತೊಟ್ಟಿಯಲ್ಲಿ ಜೋಡಿಸಿ ಗೊಂಬೆಯಾರತಿ ಮಾಡಲಾಗುತ್ತದೆ.

ಒಡೆಯರ್‌ರ ರಾಜಪೋಷಾಕನ್ನು ಮೈಸೂರಿನ ವಿಶೇಷ ದರ್ಜಿಯೊಬ್ಬರು ಸಿದ್ಧಪಡಿಸುತ್ತಾರೆ. ಮಿರಿಮಿರಿ ಮಿರುಗುವ ಚಿನ್ನದ ಎಳೆಗಳನ್ನೊಳಗೊಂಡ ಉಡುಪು ಧರಿಸಿದ ಒಡೆಯರ್ ರಾಜಗಾಂಭೀರ್ಯದಿಂದ ರತ್ನಸಿಂಹಾಸನ ಏರಿ ಆಸ್ಥಾನಕ್ಕೆ ಬಲಗೈ ಎತ್ತಿ ಸೆಲ್ಯೂಟ್ ಮಾಡಿ ಗತ್ತಿನಿಂದ ಕುಳಿತುಕೊಳ್ಳುತ್ತಾರೆ. 'ರಾಜಾಧಿರಾಜ... ರಾಜ ಮಾರ್ತಾಂಡ.. ಶ್ರೀಮನ್ಮಹಾರಾಜ... ಬಹುಪರಾಕ್..' ಪರಾಕುಗಳು ಮೊಳಗುತ್ತವೆ.

ದರ್ಬಾರ್‌ನಲ್ಲಿ ದಿನಕ್ಕೆ ಇಬ್ಬರಂತೆ ಅಧಿಕೃತ ಹೊಗಳುಭಟರು ಇರುತ್ತಾರೆ. ಅನಧಿಕೃತವಾಗಿ ಹಲವಾರು ಹೊಗಳುಭಟರಿದ್ದು ಗೌರವದ ಬಹುಪರಾಕ್‌ನಲ್ಲಿ ಪಾರ್ಸಿ ಭಾಷೆಯ ಶಬ್ದಗಳೂ ಹೇರಳವಾಗಿವೆ. ಪಾಡ್ಯದ ದಿನ ಬೆಳಿಗ್ಗೆಯಿಂದ ಖಾಸಗಿ ದರ್ಬಾರ್ ನಡೆದರೆ, ಉಳಿದ ದಿನಗಳಲ್ಲಿ ಸಂಜೆ ವೇಳೆಯಲ್ಲಿ ನಡೆಯುತ್ತದೆ. ದ್ವಾರಪಾಲಕರು, ಪರಾಕು ಹೇಳುವವರು, ಒಡೆಯರ್ ಆಪ್ತ ಸಿಬ್ಬಂದಿ, ರಾಜದಂಡ ಹಿಡಿದ ಆಸ್ಥಾನ ಅಧಿಕಾರಿಗಳು, ರಾಜಪುರೋಹಿತರು, ವಿದ್ವಾಂಸರು, ಒಡೆಯರ್ ವಂಶಸ್ಥರು, ಬಂಧು–ಮಿತ್ರರೆಲ್ಲರೂ ಖಾಸಗಿ ದರ್ಬಾರಿನಲ್ಲಿರುತ್ತಾರೆ.

ಪ್ರತಿದಿನ ಸಂಜೆ ಖಾಸಗಿ ದರ್ಬಾರ್ ನಡೆಯುವ ಮುನ್ನ ಪಟ್ಟದ ಆನೆ, ಪಟ್ಟದ ಹಸು, ಪಟ್ಟದ ಕುದುರೆಗಳಿಗೆ ಅಲಂಕಾರ ಮಾಡಿ ಅರಮನೆ ಆವರಣ ದಲ್ಲಿರುವ ಕೋಟೆ ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸಲಾಗುತ್ತದೆ. ನಂತರ ಅರಮನೆಯೊಳಗೆ ಇವುಗಳ ಪ್ರವೇಶ. ಸಿಂಹಾಸನಾರೂಢರಾದ ಒಡೆಯರ್‌ಗೆ ದೇವಾಲಯಗಳಿಂದ ಬಂದ ಪುರೋಹಿತರು ಪ್ರಸಾದ ಮತ್ತು ಮಂತ್ರಪುಷ್ಪ ಹಾಗೂ ಮಂಗಳಾಕ್ಷತೆ ನೀಡುವುದು, ನಜರ್ ಒಪ್ಪಿಸುವುದು ನಡೆಯುತ್ತದೆ. ನಂತರ ಒಡೆಯರ್‌ರಿಂದ ರಾಜಪರಿವಾರದ ಮಂದಿಗೆ ಕಾಣಿಕೆ.

ನವಮಿಯ ರಾತ್ರಿ ಅಲಮೇಲಮ್ಮನ ದೇವಸ್ಥಾನದಲ್ಲಿ ಪೂಜೆ, ಆಯುಧ ಶಾಲೆಯಲ್ಲಿ ಆಯುಧಪೂಜೆ, ವಿಜಯದಶಮಿಯ ದಿನ ಜಟ್ಟಿಗಳ ವಜ್ರಮುಷ್ಟಿ ಕಾಳಗ, ಇದೇ ದಿನ ಶಮೀಪೂಜೆ ಎಲ್ಲವೂ ಶಾಸ್ತ್ರೋಕ್ತವಾಗಿ ನಡಯುತ್ತದೆ.

ಕಂಕಣಧಾರಿಯಾದ ಬಳಿಕ ನವರಾತ್ರಿ ಉತ್ಸವದ ಪೂಜಾವಿಧಿಗಳು ಮುಗಿಯುವ ತನಕವೂ ಒಡಯರ್ ಅರಮನೆಯಿಂದ ಹೊರಗೆ ಹೋಗುವಂತಿಲ್ಲ. ಕಟ್ಟುನಿಟ್ಟಿನ ಆಚರಣೆಗಳು ಇದ್ದರೂ ಉಪವಾಸ ವ್ರತ ಮಾತ್ರ ಇಲ್ಲ. ಅದರಲ್ಲೂ ಒಡೆಯರ್ ವಂಶದಲ್ಲಿ ಗೃಹಸ್ಥರಂತೂ ಉಪವಾಸ ಮಾಡಲೇ ಬಾರದಂತೆ. ಹಾಗೆಯೇ ಯಾವುದೇ ಪೂಜೆಗಳಲ್ಲಿ ಶಂಖ ಊದುವಂತಿಲ್ಲ, ಕೊಂಬು ವಾದ್ಯದ ಸದ್ದು ಮಾಡುವಂತಿಲ್ಲ. ಇದೆಲ್ಲವೂ ಯುದ್ಧದ ಸಂದರ್ಭದಲ್ಲಿ ಮಾತ್ರ!

ಒಟ್ಟಿನಲ್ಲಿ ನವರಾತ್ರಿಯ ಖಾಸಗಿ ದರ್ಬಾರ್ ಆಳರಸರ ಗತಕಾಲದ ವೈಭವವನ್ನು ತೆರೆದಿಡುವ ನೆನಪುಗಳ ಮಹಾಮೆರವಣಿಗೆಯೇ ಸರಿ!





ಗತವೈಭವದ ಮೆಲುಕು



